# ಬಸವಣ್ಣನವರ ಜೀವನ ಮತ್ತು ಅವರ ಸಮಾಜ ಸುಧಾರಣೆ

ಎಂ.ಟಿ. ವಿಶ್ವನಾಥಯ್ಯ



ಈ ತಿಂಗಳು ೨೬ನೆಯ ತಾರೀಖು ಶ್ರೀ ಬಸವಣ್ಣನವರ ಜಯಂತಿ. ಅವರು ಜನಸಾಮಾನ್ಯರ ಉದ್ಧಾರಕ್ಕಾಗಿ ದುಡಿದ ಅಪೂರ್ವ ಆಧ್ಯಾತ್ಮಿಕ ವ್ಯಕ್ತಿ. ಅವರ ಜೀವನ ಮತ್ತು ಸಾಧನೆಯ ಕಿರುಪರಿಚಯವನ್ನು ಮಾಡಿಕೊಟ್ಟಿರುವ ಶ್ರೀ ವಿಶ್ವನಾಥಯ್ಯನವರು ನಿವೃತ್ತ ಇಂಜಿನೀಯರ್ ಮತ್ತು ವಿಶ್ವ ಹಿಂದೂ ಪರಿಷತ್ತಿನ ಮೈಸೂರು ಶಾಖೆಯ ಅಧ್ಯಕ್ಷರಾಗಿರುವರು.

## ವಿಷಯ ಪ್ರವೇಶ

ಜಾಗತಿಕ ಮಹಾಪುರುಷರ ಮಾಲಿಕೆಯಲ್ಲಿ ಬಸವಣ್ಣನವರ ಮೂರ್ತಿ ಸ್ವರೂಪ ಉಜ್ವಲವಾಗಿ ಕಂಗೊಳಿಸುತ್ತಿದೆ. ರಾಜಕೀಯ ಅಸ್ಥಿರತೆ, ಸಾಮಾಜಿಕ ವೈಷಮ್ಯ, ಧಾರ್ಮಿಕ ಜಟಿಲತೆ, ವ್ರತಾಚಾರಗಳ ಡಾಂಭಿಕತೆ, ಜನಸಾಮಾನ್ಯರ ಅಜ್ಞಾನಗಳಿಂದಾಗಿ ಜನತೆ ಕಂಗೆಟ್ಟ ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಜನಿಸಿದರು. ಅವರ ಜನನ, ಸಾಧನೆ, ಸಿದ್ಧಿಗಳು ಲೋಕೋತ್ತರವಾದವುಗಳು. ಕಲ್ಯಾಣ ನಗರದಲ್ಲಿ ಕಲ್ಯಾಣಕೇಂದ್ರವನ್ನು ರೂಪಿಸಿದ ಬಸವಣ್ಣನವರು ಹಿಂದಿನ ಸಾಮಾಜಿಕ, ಧಾರ್ಮಿಕ, ನೈತಿಕ, ಲೌಕಿಕ ರಂಗಗಳಲ್ಲಿ ಅದ್ಭುತವಾದ ಚೈತನ್ಯವನ್ನು ತುಂಬಿದರು. ಮಾನವತಾವಾದಿಯಾದ ಅವರು ಜನತೆಯಲ್ಲಿ ಸಮಾನತೆಯನ್ನು ರೂಢಿಸಿದರು. ದೈವೀ ಜೀವನವನ್ನು ತಾವು ಬಾಳುತ್ತ ಇತರರೂ ಹಾಗೆ ಬಾಳುವ ಹಾದಿಯನ್ನು ಸುಗಮಗೊಳಿಸಿದರು. ಕನ್ನಡ ಸಾಹಿತ್ಯಕ್ಕೆ ವಚನ ರೂಪವನ್ನು ಒದಗಿಸಿ ಸಾಹಿತ್ಯ ರಂಗದಲ್ಲಿ ಯುಗಪ್ರವರ್ತಕರಾದರು. ಕಾಯಕ ತತ್ವದಿಂದಾಗಿ ಆರ್ಥಿಕ ಭದ್ರತೆಯನ್ನೂ ವ್ಯಕ್ತಿಗತ ಶೀಲದ ಸಮಗ್ರತೆಯನ್ನೂ ರೂಪಿಸಿದರು. ಶಿವಾನುಭವಿಗಳ ಸಮ್ಮಿಲನ ಅಂದು ಕಲ್ಯಾಣದಲ್ಲಿ ಸಾಧ್ಯವಾಯಿತು. ಕಲ್ಯಾಣನಗರ ಅಂದು ಪಾವನವಾಗಿ ಅಭಿನವ ಕೈಲಾಸವೆನಿಸಿತು. ಬಸವಣ್ಣನವರು ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ವಿಶ್ವಸಂದೇಶವನ್ನು ಬಿತ್ತರಿಸಿದರು. ಮರ್ತ್ಯಲೋಕ, ದೇವಲೋಕಗಳಿಗೆ ನಿಚ್ಚಣಿಕೆಯಾದರು.

ಇಂದಿನ ಅನೇಕ ಸಮಸ್ಯೆಗಳಿಗೆ ಪರಿಹಾರ ಬಸವಣ್ಣನವರ ವಚನಗಳಲ್ಲಿ ದೊರಕುತ್ತದೆ. ಅವರು ಜಗತ್ತನ್ನು ತಿರಸ್ಕರಿಸಲಿಲ್ಲ. 'ಜಗತ್ತು ಕರ್ತಾರನ ಕಮ್ಮಟ' ಎಂದರು. ಅನೇಕ ದೇವರುಗಳ ಹಾವಳಿಯನ್ನು ತಪ್ಪಿಸಿ ಏಕ ದೇವೋಪಾಸನೆಗೆ ಜನರನ್ನು ಹಚ್ಚಿದರು. ಸುಲಿಗೆಯ ಕೇಂದ್ರಗಳಾಗಿದ್ದ ದೇವಸ್ಥಾನಗಳನ್ನು ತಿರಸ್ಕರಿಸಿ 'ದೇಹವೇ ದೇಗುಲ'ವಾಗಿ ಬೆಳೆಯುವ ಪರಿಯನ್ನು ಬೋಧಿಸಿದರು. ದಯೆ, ಮಾನವೀಯತೆಯನ್ನು ಮೂಡಿಸಲು ಮೃದುವಚನವೇ ಸಕಲ ಜಪತಪಗಳೆಂದರು, 'ಸದುವಿನಯವೆ ಸದಾಶಿವನೊಲುಮೆ' ಎಂದು ಸಾರಿದರು. ಬಸವಣ್ಣನವರ ಇಂಥ ಅಮೂಲ್ಯ ವಿಚಾರಗಳು ಇಂದಿನ ನಮ್ಮ ಬದುಕಿಗೆ ಅನಿವಾರ್ಯವಾಗಿವೆ.

> ಮರ್ತ್ಯಲೋಕವೆಂಬುದು
> ಕರ್ತಾರನ ಕಮ್ಮಟವಯ್ಯ
> ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ ।
> ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ
> ಕೂಡಲ ಸಂಗಮದೇವ ॥ —ಬಸವಣ್ಣ

## ಬಸವಣ್ಣನವರ ಜೀವನ ಮತ್ತು ಸಾಧನೆ

ಬಿಜಾಪುರ ಜಿಲ್ಲೆಯ ಒಂದು ತಾಲ್ಲೂಕ ಸ್ಥಳವಾದ ಇಂಗಳೇಶ್ವರ ಬಾಗೇವಾಡಿಯಲ್ಲಿ ಬಸವಣ್ಣನವರು ಜನಿಸಿದರು. ಅವರು ಕೂಡಲ ಸಂಗಮದ ಗುರುಕುಲದಲ್ಲಿ ಜಾತವೇದ ಮುನಿಗಳಿಂದ ಶಿಕ್ಷಣ ಪಡೆದು, ಸಾಧನೆಗೈದು ಸಿದ್ಧಿಯನ್ನು ಪಡೆದರು. ಅವರ ವಿನಯ, ಪಾಂಡಿತ್ಯ, ಪ್ರತಿಭೆಯ ಸಮಾಚಾರ ತಿಳಿದು ಬಸವಣ್ಣನವರ ಸೋದರಮಾವ ಬಲದೇವ ಮಂತ್ರಿ ತನ್ನ ಮಗಳಾದ ಗಂಗಾಂಬಿಕೆಗೆ ಬಸವಣ್ಣನವರೇ ಯೋಗ್ಯ ವರನೆಂದು ನಿರ್ಧರಿಸಿ, ಸಕಲ ವೈಭವದಿಂದ ಕಲ್ಯಾಣಕ್ಕೆ ಬರಮಾಡಿಕೊಂಡನು.

ಗಂಗಾಂಬಿಕೆ ಬಲದೇವ ಮಂತ್ರಿಯ ಮಗಳು; ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡಿದ್ದಳು. ಮಗಳ ಮೇಲಿನ ಪ್ರೀತಿಯಿಂದಾಗಿ ತಂದೆ ಮತ್ತೆ ವಿವಾಹವಾಗಲಿಲ್ಲ. ಬಲದೇವಮಂತ್ರಿಗೆ ಮಗಳೂ ಮಗನೂ ಎಲ್ಲವೂ ಗಂಗಾಂಬಿಕೆಯೇ ಆಗಿದ್ದಳು. ಗಂಗಾಂಬಿಕೆ ಕನ್ನಡ ಮತ್ತು ಸಂಸ್ಕೃತ ಭಾಷೆಗಳನ್ನು ಬಲ್ಲವಳಾಗಿದ್ದಳು. ಸಂಗೀತ ಸಾಧನೆ ಮಾಡಿದ್ದಳು. ಬಿಲ್ಲುವಿದ್ಯೆ, ಕತ್ತಿವರಸೆಯನ್ನೂ ಬಲ್ಲವಳಾಗಿದ್ದಳು. ತಂದೆಯ ಪ್ರತಿಯೊಂದು ಕಾರ್ಯದಲ್ಲೂ ಸಹಾಯಕಳಾಗಿದ್ದಳು. ರೂಪ, ಗುಣ ಸಂಪನ್ನಳಾದ ಮಗಳನ್ನು ಬಸವಣ್ಣನವರಿಗೆ ಕೊಟ್ಟು ವಿವಾಹ ಮಾಡಲು ಬಲದೇವ ಮಂತ್ರಿ ನಿರ್ಧರಿಸಿದ. ಅಂತೆಯೆ ಬಸವಣ್ಣ-ಗಂಗಾಂಬಿಕೆಯರ ಮದುವೆಯನ್ನು ಕಲ್ಯಾಣದಲ್ಲಿ ಅತ್ಯಂತ ವೈಭವದಿಂದ ನೆರವೇರಿಸಿದ.

ಅಳಿಯ-ಮಗಳು ತನ್ನ ಮನೆಯಲ್ಲಿರಬೇಕೆಂದು ಅಪೇಕ್ಷಿಸಿದ ಬಲದೇವ ಮಂತ್ರಿ. ಆದರೆ ಬಸವಣ್ಣನವರ ಸ್ವಾಭಿಮಾನ ಇದ ಕ್ಕೊಪ್ಪಲಿಲ್ಲ. ಕಾಯಕಷ್ಟದಿಂದ ಗಳಿಸಿದ ಹಣವೇ ಸಂಸಾರ ಸಾಗಿಸಲು ಯೋಗ್ಯವೆಂದು ಭಾವಿಸಿದ ಬಸವಣ್ಣ ದೊರೆ ಬಿಜ್ಜಳನ ಓಲಗದಲ್ಲಿ ಕರಣಿಕವೃತ್ತಿ ಕೈಗೊಂಡು, ಬೇರೆ ಮನೆ ಮಾಡಿ, ಪತ್ನಿಯನ್ನೂ ಅಕ್ಕನಾಗಲಾಂಬಿಕೆಯನ್ನೂ ಆಕೆಯ ಚಿಕ್ಕ ಮಗು ಚೆನ್ನ ಬಸವಣ್ಣನನ್ನೂ ಕರೆದೊಯ್ದರು. ಬಸವಣ್ಣನವರು ಸುಖದಿಂದ ದಾಂಪತ್ಯ ಜೀವನ ನಡೆಸುತ್ತಿರುವುದನ್ನು ಕಂಡು, ವಯೋವೃದ್ಧನಾದ ಬಲದೇವ ಮಂತ್ರಿ ಸಂತೃಪ್ತನಾದ; ಮುಂದೆ ನಿಶ್ಚಿಂತೆಯಿಂದ ಶಿವನ ಪಾದ ಸೇರಿದ.

ಮಂತ್ರಿಯ ಏಕೈಕ ಪುತ್ರಿಯಾದ ಗಂಗಾಂಬಿಕೆ ಪತಿಗೆ ತಕ್ಕ ಸತಿಯಾಗಿ ಬಾಳುತ್ತಿದ್ದಳು. 'ಕಾಯಕವೇ ಕೈಲಾಸ' ಎಂದು ಬಗೆದ ಬಸವಣ್ಣನವರೊಂದಿಗೆ ಸಂತೋಷದಿಂದ ಕಾಯಕನಿರತಳಾಗಿದ್ದಳು. ಕರಣಿಕನ ಪತ್ನಿಯಾಗಿ ಒಪ್ಪ ಓರಣದಿಂದ ಗೃಹಸ್ಥ ಬದುಕನ್ನು ನಡೆಸುತ್ತಿದ್ದಳು. ಆ ವೇಳೆಗೆ ಬಿಜ್ಜಳ ದೊರೆಯ ಆಸ್ಥಾನ ಪಂಡಿತರಿಗೆಲ್ಲ ಒಂದು ಲಿಪಿಯನ್ನು ಓದಲು ಸಾಧ್ಯವಾಗಲಿಲ್ಲ. ಬಸವಣ್ಣನವರು ಆ ಲಿಪಿಯನ್ನು ದೊರೆಗೆ ಓದಿ ಹೇಳಿದರು. ಬಸವಣ್ಣನವರ ಸೌಮ್ಯ ಗುಣ, ಪಾಂಡಿತ್ಯ, ಪ್ರತಿಭೆಗಳಿಗೆ ಮಾರುಹೋದ ಬಿಜ್ಜಳ ದೊರೆ ಬಸವಣ್ಣನವರಿಗೆ ಮಂತ್ರಿಪದವಿಯಿತ್ತ. ಅಷ್ಟೇ ಅಲ್ಲ; ತನ್ನ ಸಾಕು ತಂಗಿ ನೀಲಾಂಬಿಕೆಯನ್ನೂ ಬಸವಣ್ಣನವರಿಗೆ ಧಾರೆಯೆರೆದುಕೊಟ್ಟ.

ಬಸವಣ್ಣನವರ ಸಾಮಾಜಿಕ ಜೀವನದಲ್ಲಿ ಗಂಗಾಂಬಿಕೆ ಮತ್ತು ನೀಲಾಂಬಿಕೆಯರ ಪಾತ್ರ ಹಿರಿದಾಗಿತ್ತು. ಅವರು ಆತನ ಧಾರ್ಮಿಕ ಜೀವನದಲ್ಲೂ ಸಹಚರಿಗಳಾದರು, ಆಧ್ಯಾತ್ಮಿಕ ಜೀವನದಲ್ಲೂ ಸಹಾಯಕರಾದರು. ಆದರ್ಶದಂಪತಿಗಳಾದರು. ಇಬ್ಬರು ಹೆಂಡತಿಯರಿದ್ದರೂ ಬಸವಣ್ಣನವರ ಬದುಕು ಅತ್ಯಂತ ಸಂತೃಪ್ತವಾಗಿತ್ತು. ಗಂಗಾಂಬಿಕೆ ಬಸವಣ್ಣನವರ ಮಂತ್ರಿಕಾರ್ಯದಲ್ಲಿ ಸದಾ ನೆರವಿಗಿರುತ್ತಿದ್ದಳು. ಮನೆಗೆ ಬರುವ ಅತಿಥಿ ಅಭ್ಯಾಗತರನ್ನು ಉಪಚರಿಸುತ್ತಿದ್ದಳು. ಸೌಮ್ಯಸ್ವಭಾವದ ನೀಲಾಂಬಿಕೆ ದಾಸೋಹಂ ಭಾವದಿಂದ ಅಡಿಗೆಮನೆಯ ಪ್ರಸಾದದ ಹೊಣೆಗಾರಿಕೆಯನ್ನು ಹೊತ್ತಳು. ಬಸವಣ್ಣನವರು ವಿಶಾಲ ತಳಹದಿಯಮೇಲೆ ಹೊಸ ಸಮಾಜ ರಚನೆಗೈಯುತ್ತಿದ್ದಾಗ ಮನೆ ಮಹಾಮನೆಯಾಗಲು, ಬಸವಣ್ಣನವರ ಭಕ್ತಿ, ಆತ್ಮಶಕ್ತಿ ಹೆಚ್ಚಾಗಲು ಪತ್ನಿಯರೀರ್ವರೂ ಹೆಚ್ಚಿನ ಸಹಾಯಕರಾದರು.

ಕಲ್ಯಾಣ ಪಟ್ಟಣ ಬಸವಣ್ಣನವರ ಬದುಕಿನ ಮುಖ್ಯ ಕೇಂದ್ರವಾಯಿತು. ಈ ಸಂದರ್ಭದಲ್ಲಿ ಶರಣ ಸಮುದಾಯದ ಸಂಘಟನೆ, ಅನುಭವ ಮಂಟಪದ ಸ್ಥಾಪನೆ, ಸಿದ್ಧಾಂತಗಳ ರಚನೆ-ಪ್ರಸಾರ, ವಚನ ಸಾಹಿತ್ಯದ ಸೃಷ್ಟಿ ಇತ್ಯಾದಿ ಬಹುಮುಖ ಕಾರ್ಯಗಳು ನಡೆದವು. ಕೂಡಲ ಸಂಗಮದಲ್ಲಿ ಆತ್ಮಕಲ್ಯಾಣ ಮಾಡಿಕೊಂಡಿದ್ದ ಬಸವಣ್ಣನವರು ಈಗ ಸಮಾಜ ಕಲ್ಯಾಣ ಕಾರ್ಯದಲ್ಲಿ ತೊಡಗಿಕೊಂಡರು. ಸಮಾಜಸೇವೆಯ ಭಾಗವೆಂಬಂತೆ ವರ್ಗಭೇದ, ವರ್ಣಭೇದ, ಲಿಂಗಭೇದ ನಿವಾರಣೆಯ ತೀವ್ರಕ್ರಮಗಳನ್ನು ಬಸವಣ್ಣನವರು ಇಲ್ಲಿ ಕೈಗೆತ್ತಿಕೊಂಡರು. ಈ ಪ್ರಗತಿಪರ ಧೋರಣೆಗಳನ್ನು ಪ್ರತಿಭಟಿಸುವ ರೀತಿಯಲ್ಲಿ ಅಗ್ರಹಾರ ಸಂಸ್ಕೃತಿ, ದೇವಾಲಯ ಸಂಸ್ಕೃತಿ ಮತ್ತು ರಾಜಸತ್ತಾ ಸಂಸ್ಕೃತಿಗಳು ಒಟ್ಟಾಗಿ ನಿಂತು ಅವರ ಈ ಆಂದೋಲನವನ್ನು ಹತ್ತಿಕ್ಕಿದವು. ಸತ್ಯವನ್ನು ಎತ್ತಿಹಿಡಿದ ಶರಣರು ದಮನಕ್ಕೆ ಗುರಿಯಾದರು. ಬಸವಣ್ಣನವರು ಕಲ್ಯಾಣವನ್ನು ತೊರೆದು ಕೂಡಲ ಸಂಗಮಕ್ಕೆ ಬಂದು ಐಕ್ಯರಾದರು.

ಅಂದಿನ ಸಮಾಜದಲ್ಲಿ ನೆಲೆಯೂರಿದ್ದ ರಾಜವರ್ಗ-ಪ್ರಜಾವರ್ಗ, ಪುರೋಹಿತವರ್ಗ-ಭಕ್ತವರ್ಗ, ಪುರುಷವರ್ಗ-ಸ್ತ್ರೀವರ್ಗ ಇವುಗಳಲ್ಲಿ ಸೀಳು ತೋರಿ, ಒಂದು ಇನ್ನೊಂದನ್ನು ಶೋಷಿಸುವುದರ ಮೂಲಕ ಜೀವನ ವ್ಯವಸ್ಥೆಯ ಸಮತೋಲನ ತಪ್ಪಿಹೋಗಿತ್ತು. ಇದನ್ನು ನಿವಾರಿಸಿ ಸಾಮಾಜಿಕ ಸಮತೋಲನವನ್ನು ತರಲು ಹೋರಾಡಿದರು ಬಸವಣ್ಣ. ಬಸವಣ್ಣ ತಾವೊಬ್ಬರೇ ಅಲ್ಲದೆ ಗಂಗಾಂಬಿಕೆ, ನೀಲಾಂಬಿಕೆ ಪತ್ನಿಯರೊಂದಿಗೆ, ಅಕ್ಕನಾಗಮ್ಮ ಮತ್ತು ಆಕೆಯ ಮಗ ಚೆನ್ನ ಬಸವಣ್ಣ ಹೀಗೆ ಇಡೀ ಕುಟುಂಬವೇ ಅವರ ಜನಾಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿದುದು ಒಂದು ವಿಶೇಷ.

## ಬಸವಣ್ಣನವರ ಸಮಾಜ ಸುಧಾರಣೆ

ಬಸವಣ್ಣನವರದು ಬಹುಮುಖ ವ್ಯಕ್ತಿತ್ವ, ಬಹುಮುಖ ಪ್ರತಿಭೆ. ಅವರು ವಿಶ್ವ ಕುಟುಂಬಿ, ಕಾಯಕ ಯೋಗಿ, ತತ್ವಜ್ಞಾನಿ, ಏಕದೇವೋಪಾಸಕ, ಜಾತಿಪದ್ಧತಿ ವಿರೋಧಿ, ಸ್ತ್ರೀಕುಲೋದ್ಧಾರಕ, ಹಿಂದೂ ಸಮಾಜ ಸಂಘಟಕ, ದಲಿತೋದ್ಧಾರಕ, ಸ್ವತಂತ್ರ ವಿಚಾರವಾದಿ, ಕ್ರಾಂತಿಪುರುಷ, ಕಲ್ಯಾಣರಾಜ್ಯ ನಿರ್ಮಾಪಕ. ಅವರು ಭಕ್ತ ಭಂಡಾರಿಗಳು, ಶ್ರೇಷ್ಠ ದಾರ್ಶನಿಕರು, ಅನುಭಾವಿಗಳು ಮತ್ತು ಶ್ರೇಷ್ಠ ಕವಿಗಳು, ಎಲ್ಲಕ್ಕೂ ಮಿಗಿಲಾಗಿ ಪ್ರಪಂಚ ಕಂಡ ಮಹಾನ್ ಮಾನವತಾವಾದಿಗಳು. ಮುಂದೆ ಅವರ ಕೆಲವು ಸಾಮಾಜಿಕ ಚಿಂತನೆಗಳನ್ನು ಕುರಿತು ವಿವೇಚಿಸಲಾಗಿದೆ.

ಬಸವಣ್ಣನವರು ಕಲ್ಯಾಣದಲ್ಲಿ ಸಂಸ್ಥಾಪಿಸಿದ ಅನುಭವ ಮಂಟಪವು ಧಾರ್ಮಿಕ ಇತಿಹಾಸದಲ್ಲಿ ಅಪೂರ್ವ ಸಂಸ್ಥೆಯಾಗಿತ್ತು. ಆ ಅನುಭವ ಮಂಟಪದಲ್ಲಿ ಅಂದಿನ ಶರಣರೂ ಶರಣೆಯರೂ ಒಟ್ಟುಗೂಡಿ ತಮ್ಮ ಆಚಾರ ವಿಚಾರಗಳನ್ನೂ ನಡೆನುಡಿಗಳನ್ನೂ ಚರ್ಚಿಸಿ ಮಾರ್ಪಡಿಸಿ ನೇರ್ಪಡಿಸಿಕೊಳ್ಳುತ್ತಿದ್ದರು. ಶಿವಾನುಭವಿಗಳೆಲ್ಲ ಅಲ್ಲಿ ಸೇರಿ ಹೊಸ ಬೆಳಕನ್ನು ಪಡೆಯುತ್ತಿದ್ದರು. ಆದುದರಿಂದ ಅನುಭವ ಮಂಟಪವು ಅಂದಿನ ಜನತೆಯ ವಿಶ್ವವಿದ್ಯಾನಿಲಯದಂತಿತ್ತು. ಆ ಸಂಸ್ಥೆಯ ಅಧ್ಯಕ್ಷರು ಅಲ್ಲಮ ಪ್ರಭು.

ಬಸವಣ್ಣ, ಚೆನ್ನಬಸವಣ್ಣ, ಸಿದ್ಧ ರಾಮಯ್ಯ, ಮಡಿವಾಳ ಮಾಚಯ್ಯ, ಅಕ್ಕಮಹಾದೇವಿ ಇವರೇ ಮೊದಲಾದವರು ಅನುಭವ ಮಂಟಪದಲ್ಲಿ ಸೇರುತ್ತಿದ್ದ ಪ್ರಮುಖ ವ್ಯಕ್ತಿಗಳು.

ಬಸವಣ್ಣನವರು ಪ್ರಚಾರ ಮಾಡಿದ ವೀರಶೈವಧರ್ಮದ ಪ್ರಭಾವಕ್ಕೆ ಅಂದು ಅನೇಕರು ಒಳಗಾದರು. ಅದಕ್ಕೆ ಕಾರಣವೆಂದರೆ ಆ ಧರ್ಮದ ಸುಲಭವಾದ ಬೋಧೆ ಮತ್ತು ಆಚರಣೆ. ಭರತ ಖಂಡದ ನಾನಾ ಭಾಗಗಳಿಂದ ಅಸಂಖ್ಯಾತ ಸಾಧಕರು ಬಂದು ಕಲ್ಯಾಣದಲ್ಲಿ ನೆಲೆಸಿದರು. ಅವರೆಲ್ಲರೂ ಅನುಭವ ಮಂಟಪದಲ್ಲಿ ಪಾಲ್ಗೊಳ್ಳುತ್ತಿದ್ದರು. ಬಸವಣ್ಣನವರು ಸಮಾಜದ ಅರ್ಧ ಅಂಗವಾದ ಮಹಿಳಾ ವರ್ಗಕ್ಕೂ ಸಮಾನ ಸ್ಥಾನವನ್ನು ಕಲ್ಪಿಸಿ ಕೊಟ್ಟರು. ಅನುಭವ ಮಂಟಪದಲ್ಲಿ ಭಾಗವಹಿಸುತ್ತಿದ್ದ ಅಕ್ಕ ಮಹಾದೇವಿ, ಮೋಳಿಗೆ ಮಹಾದೇವಿ, ನೀಲಾಂಬಿಕೆ, ಮುಕ್ತಾಯಕ್ಕ—ಇವರೇ ಇವಕ್ಕೆ ನಿದರ್ಶನರಾಗಿದ್ದಾರೆ.

### ಅಸ್ಪೃಶ್ಯತಾ ನಿವಾರಣೆ

ಅಸ್ಪೃಶ್ಯತೆ ಈ ದೇಶದ ಒಂದು ಜ್ವಲಂತ ಸಮಸ್ಯೆ. ಪಶು-ಪಕ್ಷಿ-ಪ್ರಾಣಿಗಳೊಂದಿಗೆ ಮುದ್ದಾಡುವ ಮನುಷ್ಯ ತನ್ನಂತೆಯೇ ಇರುವ ಮನುಷ್ಯನನ್ನು ಅಸ್ಪೃಶ್ಯನನ್ನಾಗಿಸಿ ದೂರ ಇಟ್ಟದ್ದು ಈ ವ್ಯವಸ್ಥೆಯ ದೊಡ್ಡ ದುರಂತ. ಈ ನಾಡಿನಲ್ಲಿ ಅಸ್ಪೃಶ್ಯತೆ ನಿವಾರಣೆಯಾಗಿ ಎಲ್ಲರೂ ಮನುಷ್ಯರಂತೆ ಬಾಳಲು ಸೈದ್ಧಾಂತಿಕ ನೆಲೆಯಲ್ಲಿ ಹೋರಾಟ ಮಾಡಿದ ವ್ಯಕ್ತಿ ಬಸವಣ್ಣ. ದಲಿತ ಜನಾಂಗದಿಂದ ಬಂದ ಶರಣರನ್ನು ತಮ್ಮ ಅಪ್ಪ-ಬೊಪ್ಪನೆಂದು ಅಪ್ಪಿಕೊಂಡರು. ಯಾವ ದಲಿತ ಜನಾಂಗ ಶತಮಾನಗಳಿಂದ ಕತ್ತಲೆಯಲ್ಲಿತ್ತೋ ಅಂತಹ ಜನರ ಮುಖಂಡತ್ವದಲ್ಲಿ ಬಸವಣ್ಣನವರು ಚಳುವಳಿ ಕಟ್ಟಿದರು. ಯಾರು ಧರ್ಮ-ಸಮಾಜದಿಂದ ದೂರವಿದ್ದರೋ ಅಂಥವರನ್ನು ಧರ್ಮ-ಸಮಾಜದ ಪ್ರಮುಖ ಅಂಗವನ್ನಾಗಿ ಮಾಡಿದರು. ಬಸವಣ್ಣನವರು ದಲಿತರನ್ನು ಬೆಳೆಸಿದರು ಬೆಳಗಿಸಿದರು. ಚೆನ್ನಯ್ಯನನ್ನು ಅಪ್ಪನೆಂದರು, ಕಕ್ಕಯ್ಯನನ್ನು ಬೊಪ್ಪನೆಂದರು, ಕಿನ್ನರಿ ಬೊಮ್ಮಯ್ಯನನ್ನು ಅಣ್ಣನೆಂದರು. 'ಕಕ್ಕಯ್ಯನ ಮನೆಯಲ್ಲಿ, ಚೆನ್ನಯ್ಯ ದಾಸಯ್ಯರ ಮನೆಯಲ್ಲಿ ಭಕ್ತಿಯನ್ನು ಬೇಡಿದೆ' ಎಂದು ಹೆಮ್ಮೆಯಿಂದ ಹೇಳಿಕೊಂಡರು. ಇವೆಲ್ಲಾ ವಚನಗಳನ್ನು ನೋಡಿದಾಗ ಬಸವಣ್ಣನವರು ಎಂತಹ ಎತ್ತರಕ್ಕೇರಿದವರೆಂದು ಸ್ಪಷ್ಟವಾಗುತ್ತದೆ.

**ಹೊಲೆಯೊಳಗೆ ಹುಟ್ಟಿ, ಕುಲವನರಸುವೆ,**
**ಎಲವೋ ಮಾತಂಗಿಯ ಮಗ ನೀನು!**
**ಸತ್ತುದನೆಳೆವನೆತ್ತಣ ಹೊಲೆಯ?....**

ಇಂತಹ ಅನೇಕ ವಚನಗಳನ್ನು ಈ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿಸಬಹುದು. ಹೊಲೆತನವೆಂದರೆ ಯಾವುದು, ನಿಜವಾದ ಹೊಲೆಯನಾರು ಎಂದು ಸ್ಪಷ್ಟಪಡಿಸಿದರು ಬಸವಣ್ಣನವರು. ವ್ಯಾಸ-ಮಾರ್ಕಂಡೇಯ, ಮಾತಂಗಿ-ಮಂಡೋದರಿ; ಅಗಸ್ತ್ಯ ದೂರ್ವಾಸ, ಕಶ್ಯಪ-ಕೌಂಡಿನ್ಯ ಈ ಮುಂತಾದವರ ಸಾಧನೆಯನ್ನೂ ಅವರು ಹುಟ್ಟಿಬಂದ ಕುಲವನ್ನೂ ಜನತೆಯ ಮುಂದಿಟ್ಟ ಬಸವಣ್ಣನವರು, ಹುಟ್ಟಿಗೂ-ಸಾಧನೆಗೂ ಯಾವ ಸಂಬಂಧವಿಲ್ಲೆಂದು ಸ್ಪಷ್ಟಪಡಿಸಿದರು. ಬಸವಣ್ಣನವರ ಹೋರಾಟದ ಅಂತಿಮ ಗುರಿಯೇ ದಲಿತರಿಗೆ-ದುಡಿಯುವವರಿಗೆ ಸಮಾನತೆಯ ಬದುಕನ್ನು ಕೊಡುವುದಾಗಿತ್ತು.

'ಕೀಳರೆಂದು, ಪಾಪಿಗಳೆಂದು, ಅಸ್ಪೃಶ್ಯರೆಂದು, ತ್ಯಾಜ್ಯರೆಂದು ಸಾಂಪ್ರದಾಯಿಕ ಸಮಾಜವು ತಿರಸ್ಕರಿಸಿಟ್ಟ ಮಾನವರನ್ನೇ, ಸಂಸ್ಕರಿಸಿ, ಇಂಬಿಟ್ಟುಗೊಂಡು, ಜ್ಯೋತಿಯುಗದ ಕಿಡಿಗಳನ್ನಾಗಿ ಮಾಡಿ ಆ ದೀಪ್ತಿಗಳಿಂದ ಮತ್ತೆ ಅಸಂಖ್ಯಾತ ಚೇತನಗಳನ್ನು ಉದ್ದೀಪಿಸಿದ ಮಹಿಮರು ಬಸವಣ್ಣ.'

### ಕಾಯಕ ಮತ್ತು ದಾಸೋಹ

ದುಡಿಯುವ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಮಾಡಬೇಕೆಂದು ಸರ್ಕಾರ ಪ್ರಯತ್ನಿಸತೊಡಗಿದೆ. ಈ ವಿಚಾರವನ್ನು ಬಸವಣ್ಣ ಹನ್ನೆರಡನೆಯ ಶತಮಾನದಲ್ಲಿ ಆಚರಣೆಗೆ ತಂದರು. ಬಸವಣ್ಣನವರ ಸಮಾಜ ಸುಧಾರಣೆಯ ಎರಡು ಮುಖ್ಯಸಾಧನಗಳೆಂದರೆ ಒಂದು ಕಾಯಕ, ಮತ್ತೊಂದು ದಾಸೋಹ.

**'ಕಾಯಕ'** ಎಂಬುದಕ್ಕೆ ಬಸವಣ್ಣನವರ ಚಳುವಳಿಯಲ್ಲಿ ವಿಶಿಷ್ಟ ಅರ್ಥವಿದೆ. ಅದು ಕೇವಲ ದುಡಿಮೆಯಲ್ಲ. ಮನಸ್ಸಿಲ್ಲದ ಮನಸ್ಸಿನಿಂದ ಮಾಡುವ ಕೆಲಸವೂ ಅದಲ್ಲ. ಅಲ್ಲಿ ಶ್ರದ್ಧೆ ಇದೆ, ಪವಿತ್ರತೆಯಿದೆ, ನಿಸ್ವಾರ್ಥವಿದೆ. ದೇವರನ್ನು ಕಾಣುವ ಪರಿ ಇದೆ. ಪ್ರಾಮಾಣಿಕ ನಿಷ್ಠೆಯಿದೆ. ಪ್ರತಿಯೊಬ್ಬರಿಗೂ ದುಡಿಯುವ ಹಕ್ಕು ಲಭಿಸಿದಾಗ ಎಲ್ಲರೂ ಸ್ವತಂತ್ರವಾಗಿ ಬದುಕಬಲ್ಲರು. ಆಗ ದೇಶಕ್ಕೆ ಬಡತನವೇ ಬರಲಾರದು.

ಬಸವಣ್ಣನವರ ಕಾಯಕತತ್ವ ಸಮಾಜದಲ್ಲಿ ಆರ್ಥಿಕ ಸಮಾನತೆಯನ್ನು ಸ್ಥಾಪಿಸುವ ಸಾಧನವಾಯಿತು. ಕಾಯಕತತ್ವದ ಪ್ರಚಾರದಿಂದ ಸಮಾಜದಲ್ಲಿ ಕೈಬಿಟ್ಟುಹೋಗಿದ್ದ ಉದ್ಯೋಗಗಳು ಪುನಃ ಪ್ರಾರಂಭವಾಗಿ ಎಲ್ಲರಿಗೂ ಉದ್ಯೋಗಗಳು ದೊರೆಯುವಂತಾಯಿತು. ಅದು ಸ್ವಾವಲಂಬನವಾಯಿತು. ಅದು ಕೇವಲ ಉದರ ನಿರ್ವಾಹ ಸಾಧನವಾಗದೆ ಮುಕ್ತಿಮಾರ್ಗವಾಗಿಯೂ ಪರಿಣಮಿಸಿತು. ಶರಣರು ಒಬ್ಬೊಬ್ಬರು ಒಂದೊಂದು ಕಾಯಕವನ್ನು ಮಾಡುತ್ತಿದ್ದರು. ಕಾಯಕದಿಂದ ಮೇಲು ಕೀಳು ಎಂಬ ಭಾವನೆ ಹುಟ್ಟಲಿಲ್ಲ. ಅವರ ಹೆಸರುಗಳೇ ಅವರ ವೃತ್ತಿಯನ್ನು ಸೂಚಿಸುತ್ತವೆ. ಕಾಯಕದ ಹೆಸರನ್ನು ಅಡ್ಡ ಹೆಸರಿನಂತೆ ಬಳಸಿಕೊಳ್ಳುವುದು ಅವರಿಗೆ ಅಭಿಮಾನದ ವಿಷಯವಾಗಿ ಕಂಡಿತು. ಅಂತೆಯೇ ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ, ನುಲಿಯ ಚಂದಯ್ಯ, ದನಗಾಹಿ ರಾಮಣ್ಣ, ಮೋಳಿಗೆ ಮಾರಯ್ಯ, ಕಿನ್ನರಿ ಬೊಮ್ಮಯ್ಯ ಹೀಗೆ ಅನೇಕ ಶರಣರ ಹೆಸರನ್ನು ಉಲ್ಲೇಖಿಸಬಹುದು.

ಕಾಯಕತತ್ವದ ಇನ್ನೊಂದು ಮುಖವೇ ದಾಸೋಹತತ್ವ. ಇದರ ಮೂಲಕವೇ ಬಸವಣ್ಣ ಸಮತಾವಾದವನ್ನು ತರಲು ಪ್ರಯತ್ನಿಸಿದರು. ಎಲ್ಲರೂ ಪ್ರಾಮಾಣಿಕವಾಗಿ ನೀತಿಯಿಂದ ದುಡಿಯುವುದು ಕಾಯಕತತ್ವವಾದರೆ, ದುಡಿದ ಫಲವನ್ನು ಎಲ್ಲರೂ ಸಮಾನತೆಯಿಂದ-ಪ್ರೀತಿಯಿಂದ ಹಂಚಿಕೊಂಡು ತಿನ್ನುವುದು ದಾಸೋಹತತ್ವ. ದಾನ

ಸಂಸ್ಕೃತಿ ಇರುವ ಸಮಾಜದಲ್ಲಿ ಬಸವಣ್ಣ ದಾಸೋಹ ಸಂಸ್ಕೃತಿಯನ್ನು ಬಳಕೆಗೆ ತಂದರು. ದಾನ ಜನಸಮೂಹದಲ್ಲಿ ಸದಾ ಅಸಮಾನತೆಯನ್ನು ಹುಟ್ಟಿಸುತ್ತದೆ. ಅಲ್ಲಿ ಕೊಡುವವನೊಬ್ಬ, ಪಡೆಯುವವನೊಬ್ಬ. ಕೊಡುವವನ ಕೈ ಮೇಲಾಗಿ, ಪಡೆಯುವವನ ಕೈ ಕೆಳಗಾಗಿ ಮೇಲು-ಕೀಳು ವ್ಯವಸ್ಥೆ ಸದಾ ಜೀವಂತವಾಗಿರುತ್ತದೆ. ಅಹಂಕಾರವನ್ನು ಬೆಳೆಸುವ, ಅಂತಸ್ತನ್ನು ಉಳಿಸುವ 'ದಾನ'ದಂತಹ ಪದ್ಧತಿಯನ್ನು ತಿರಸ್ಕರಿಸಿದ ಬಸವಣ್ಣ ಸಮತೆಯನ್ನು ಹೇಳುವ, ಜೀವನ ಪ್ರೀತಿಯನ್ನು ಕಲಿಸುವ 'ದಾಸೋಹ'ವನ್ನು ಜಾರಿಗೆ ತಂದರು. ದಾನದ ಬದಲು ದಾಸೋಹ ಬಂದಾಗ ಕೊಡುವವನ ಅಹಂಭಾವ, ಪಡೆಯುವವನ ಕೀಳರಿಮೆ ಎರಡೂ ಇಲ್ಲವಾಗುತ್ತವೆ.

> ಎಲ್ಲ ಬಗೆಯ ಕೆಲಸ, ಎಲ್ಲ ಬಗೆಯ ಹೋರಾಟ, ಎಲ್ಲ ಬಗೆಯ ಸೃಷ್ಟಿ ಸಾಕ್ಷಾತ್ಕಾರದ ಮಾರ್ಗಗಳು. ಇದು ಲೌಕಿಕ ಇದು ಪಾರಮಾರ್ಥಿಕ ಎಂಬ ಭೇದ ಇನ್ನಿಲ್ಲ. ದುಡಿಮೆಯೇ ಪ್ರಾರ್ಥನೆ. ತನ್ನನ್ನು ತಾನು ಗೆಲ್ಲುವುದೇ ತ್ಯಾಗ. ಜೀವನವೇ ಧರ್ಮ.
>
> —ಸೋದರಿ ನಿವೇದಿತಾ
>
> (ಸ್ವಾಮಿ ವಿವೇಕಾನಂದರ ಸಂದೇಶವನ್ನು ಕುರಿತು)

ದಾಸೋಹ ತತ್ವದಿಂದ ಸಮಾಜದ ಅನೇಕ ಸಮಸ್ಯೆಗಳು ಏಕಕಾಲದಲ್ಲಿ ಪರಿಹಾರವಾಗುತ್ತವೆ. ನಾನು ಗಳಿಸಿದೆನೆಂಬ ಹಮ್ಮು ಹೋಗಿ ನಾವು ಪಡೆದದ್ದೆಂಬ ವಿನಯ ಬರುತ್ತದೆ. ಎಲ್ಲರೂ ಒಂದೇ ಕಡೆ ಪ್ರಸಾದ ಸ್ವೀಕರಿಸುವುದರಿಂದ ವರ್ಣವ್ಯವಸ್ಥೆಯಿಂದುಂಟಾದ ಜಾತಿಭೇದ ತೊರಟು ಹೋಗುತ್ತದೆ. ವಂಶಪಾರಂಪರ್ಯವಾಗಿ ಬಂದದ್ದೆಲ್ಲ ಸಮಾಜಕ್ಕೆ ಸೇರಿ, ಇಡೀ ಆದಾಯವೆಲ್ಲ ಜನಸಮೂಹದ್ದಾಗುತ್ತದೆ. ಆಗ ಸಮಾಜದ ಮೇಲೆ ನಿಷ್ಠೆ ಬೆಳೆದು ಸಾರ್ವಜನಿಕ ಹಿತಕ್ಕೆ ಪ್ರಾಧಾನ್ಯ ಸಿಗುತ್ತದೆ. ಇಂತಹ ಸಮತಾವಾದದ ತಾತ್ವಿಕ ನೆಲೆ ಇಂದು ತೀರ ಅಗತ್ಯವಾಗಿದೆ.

(ಮುಂದುವರಿಯುತ್ತದೆ)

# ಭಗವದ್ಭಾವ

ಮುಂಜಾನೆ ಏಳುವ ಬಗ್ಗೆ ಸ್ವಾಮಿ ಅಖಂಡಾನಂದಜೀಯವರು ಹೀಗೆ ಹೇಳುತ್ತಿದ್ದರು: ಖೇತ್ರಿಯ ಮಹಾರಾಜರು ತಡವಾಗಿ ಏಳುತ್ತಿದ್ದರು. ಒಂದು ದಿನ ನಾನಂದೆ, 'ಹೆಚ್ಚಾಗಿ ತಿನ್ನುವವರನ್ನು ಹಾಗೂ ತಡವಾಗಿ ಏಳುವವರನ್ನು ಲಕ್ಷ್ಮಿಯು ಬಿಟ್ಟುಹೋಗುತ್ತಾಳೆ.' ಅಂದಿನಿಂದ ಅವರು ಮುಂಜಾನೆಯೇ ಏಳುತ್ತಿದ್ದರು— ನನಗಿಂತ ಬೇಗನೆ. ಎದ್ದು ನೋಡುತ್ತೇನೆ, ಮಹಾರಾಜರು ನಗುತ್ತಿದ್ದಾರೆ. ಒಮ್ಮೊಮ್ಮೆ ಮೇಲ್ಛಾವಣಿಯ ಮೇಲೆ ನಡೆದಾಡುತ್ತಿದ್ದರು, ಒಮ್ಮೊಮ್ಮೆ ದೀಪವನ್ನುರಿಸಿ ಓದುತ್ತಿದ್ದರು.

ಠಾಕೂರರು (ಶ್ರೀರಾಮಕೃಷ್ಣರು) ಹಾಗೂ ಅವರ ಶಿಷ್ಯರು ಮುಂಜಾನೆಯೇ ಏಳುತ್ತಿದ್ದರು. ಒಂದು ದಿನ ಮಠದಲ್ಲಿ ಸ್ವಾಮಿ ಶಾರದಾನಂದ ಹಾಗು ನಾನು ಒಂದೇ ಕೋಣೆಯಲ್ಲಿ ಮಲಗಿದ್ದೆವು. ಮಂಗಳಾರತಿ ಆಗಿಹೋಗಿದೆ. ಠಾಕೂರರು ಎದ್ದುಬಿಟ್ಟಿದ್ದಾರೆ, ನಾನು ಮಲಗುವುದೇ? ಛೀ! ಛೀ! ಎಂದುಕೊಂಡು ಬೇಗನೇ ಎದ್ದೆ. ಸ್ವಲ್ಪ ನಂತರವೇ ಶರತ್ ಮಹಾರಾಜರೆದ್ದರು. ನಾನು ಮಲಗಿದ್ದೇನೆಂದು ಭಾವಿಸಿದರು! ಎಬ್ಬಿಸುವ ಪ್ರಯತ್ನ ಮಾಡುತ್ತಿರುವಾಗಲೆ ತೆರೆಯನ್ನು ಅಲುಗಾಡಿಸಿ, ನಾನು ಎದ್ದಿದ್ದೇನೆಂದು ತಿಳಿಸಿದೆ. ಹಿಂದಿನ ದಿನ ಮುಂಜಾನೆ ಏಳಲಾಗಿರಲಿಲ್ಲವೆಂದು ಅಂದು ಮಲಗುವಾಗ ಹೇಳಿ ಮಲಗಿದ್ದೆ—'ಏಯ್, ಅಖಂಡಾನಂದ ೩ ಘಂಟೆಗೆ ಸರಿಯಾಗಿ ಏಳು' ಎಂದು. ೩ ಘಂಟೆಗೆ ಸರಿಯಾಗಿ ಯಾರೋ ಎಬ್ಬಿಸಿದಂತಾಯಿತು—'ಏಯ್ ಅಖಂಡಾನಂದ, ಏಳು ೩ ಘಂಟೆಯಾಗಿದೆ.' ಠಾಕೂರರು ಯಾವಾಗ ಮಲಗುತ್ತಿದ್ದರೊ ತಿಳಿಯದು. ಹಾಗೇ ಸ್ವಾಮೀಜಿ ಕೂಡ; ರಾತ್ರಿ ಕರೆದಾಗಲೆಲ್ಲ ಅವರು ಓಗೊಡುತ್ತಿದ್ದರು.

ಉನ್ನತ ಜೀವನದಲ್ಲಿ ನಿದ್ರೆ ಕಡಿಮೆ. ಶರೀರವು ಶಕ್ತಿಯುತ ಹಾಗೂ ಸಬಲವಾಗಿರಬೇಕು. ಮುಂಜಾನೆಯೇ ಏಳಬೇಕು. ಹಾಸಿಗೆಯಲ್ಲಿಯೆ ಸ್ವಲ್ಪ ಹೊತ್ತು ಚಿಂತನೆ ಮಾಡಿದರೆ ಮನಸ್ಸು ಶಾಂತವಾಗಿರುತ್ತದೆ. ಆನಂತರ ಹಾಸಿಗೆಯನ್ನು ತೆಗೆದಿಟ್ಟು ಕೋಣೆಯನ್ನು ಗುಡಿಸಿ ಸ್ವಚ್ಛಗೊಳಿಸು, ಟ್ಯಾಂಕಿಗೆ ನೀರು ತುಂಬಿಸು. ಮಾಡುವ ಎಲ್ಲಾ ಕೆಲಸಗಳ ಹಿನ್ನೆಲೆಯಲ್ಲಿ ಭಗವದ್ಭಾವವಿರಬೇಕು.

(*ಸ್ವಾಮಿ ಅಖಂಡಾನಂದೇರ್ ಸ್ಮೃತಿ-ಸಂಚಯ್* ಎಂಬ ಬಂಗಾಳಿ ಪುಸ್ತಕದಿಂದ. ಅನುವಾದ: ಪಿ. ಉಷಾ)